ಉ) ವಿಷಯ: ಕೆ.ಜಿ.ಎಫ್. ಸಿಟಿ ಮುನಿಸಿಪಾಲಿಟಿಯ ಬಗ್ಗೆ.

ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್): ಮಾನ್ಯ ಅಧ್ಯಕ್ಷರೆ, ಸಿಟಿ ಮುನಿಸಿಪಾಲಿಟಿ, ಕೆ.ಜಿ.ಎಫ್‌ನಲ್ಲಿ ಹಲವಾರು ಬೋಗಸ್‌ಗಳಾಗಿದೆ, ತಪ್ಪುಗಳಾಗಿದೆ, 15 ಜನ ಬೋಗಸ್ ಅಪಾಯಿಂಟ್‌ಮೆಂಟ್ ಆಗಿದೆ. ಇದನ್ನೆಲ್ಲಾ ನಾನೇ ಹುಡುಕಿ ಸರ್ಕಾರಕ್ಕೆ ತಿಳಿಸಿದ್ದೆ. ಇದರ ಬಗ್ಗೆ ನಾನು ಮಾಹಿತಿ ಕೇಳಿದ್ದೆ. Last time, they have taken ten days time. ಈಗ ಶೂನ್ಯ ವೇಳೆಯಲ್ಲಿ ನನ್ನ ಪ್ರಶ್ನೆ ಏನೆಂದರೆ, District Commissioner has written a letter to the Director very clearly; 'This Municipality is not fit' ಎಂದು. ಇವರು ಮಾಡಿರುವ ತಪ್ಪುಗಳ ಬಗ್ಗೆ ಡೆಪ್ಯುಟಿ ಕಮಿಷನರ್‌ರವರೆ ಬರೆದಿದ್ದಾರೆ. ಹತ್ತು ಸಾವಿರ ರೂಪಾಯಿಗಳಿಗೆ ಸೈಟುಗಳನ್ನು ಕೆ.ಜಿ.ಎಫ್.ನಲ್ಲಿ auction ಮಾಡಿದ್ದಾರೆ, without the permission of the Government. ಅಲ್ಲಿ ಎಸ್.ಸಿ., ಎಸ್.ಟಿ.ಗಳಿಗೆ 30 ಸಾವಿರಕ್ಕೆ ಸೈಟು ಸಿಗಲಿಲ್ಲ, 60 ಸಾವಿರಕ್ಕೆ ಸೈಟು ಸಿಗಲಿಲ್ಲ, 60 ಸಾವಿರಕ್ಕೂ ಸಿಗಲಿಲ್ಲವೆಂದು ಹೇಳುವ ಇವರು ಹತ್ತು ಸಾವಿರಕ್ಕೆ ಜಮೀನನ್ನು ಹರಾಜು ಮಾಡಿದ್ದಾರೆ. ಸುಮಾರು 200 ಸೈಟುಗಳನ್ನು without Government's permission, without D.C's permission ಹರಾಜು ಮಾಡಿದ್ದಾರೆ. ಸುಮಾರು ಸಲ ಇಲ್ಲಿ ತಪ್ಪಾಗಿದೆ, ನೀವು ಮಾಡಿರುವುದು ತಪ್ಪು Direct revenue misuse ಮಾಡಿದ್ದೀರಿ, 18% ಹಣವನ್ನು ಹಾಗೆಯೇ ತಿಂದುಬಿಟ್ಟಿದ್ದಾರೆ ಎಂದು ನಾವು D.C.ಯವರ ನೋಟಿಸ್‌ಗೆ ತೆಗೆದುಕೊಂಡು, ಬಂದು ಕೊನೆಗೆ D.C ಯವರೆ ಚೆಕ್ ಮಾಡಿ ವರದಿ ಬರೆದಿದ್ದಾರೆ. "This Municipality should be dissolved" ಎಂದು " ಸೂಪರ್‌ಸೀಡ್ " ಎಂದು ಹೇಳಲು ಆಗುವುದಿಲ್ಲ. ಅದರ ಬಗ್ಗೆ D.C ಯವರು ಬರೆದು 15 ದಿವಸಗಳಾಗಿದೆ. ಇನ್ನೂ ಅದರ ಮೇಲೆ ಸೂಕ್ತ ಕ್ರಮ ತೆಗೆದುಕೊಂಡಿಲ್ಲ. ಇವರನ್ನು ಹೀಗೆಯೇ allow ಮಾಡಿಬಿಟ್ಟರೆ, already ಬಿ.ಜಿ.ಎಂ.ಎಲ್. ಅನ್ನು ಯಾವ ರೀತಿ ಮುಚ್ಚಿದ್ದಾರೋ ಹಾಗೇ non mining area ದಲ್ಲಿ "ನಮ್ಮನ್ನು ಏನೂ ಮಾಡುವುದಕ್ಕಾಗುವುದಿಲ್ಲ", ಎಂದು ಮುನಿಸಿಪಾಲಿಟಿಯನ್ನೇ ಸೇಲ್ ಮಾಡಿಬಿಡುತ್ತಾರೆ. ಅದರ ಬಗ್ಗೆ ತಾವೇನು ಕ್ರಮ ತೆಗೆದುಕೊಳ್ಳುತ್ತೀರಿ? ಅದರ ಬಗ್ಗೆ ತಾವೇನು ಹೇಳುತ್ತೀರಿ? ಹಣವನ್ನು ಏನಾದರೂ ಬಿಡುಗಡೆ ಮಾಡಬೇಕಾದರೆ immediately they will release the amount. ಕಾರಣ ಪರ್ಸೆಂಟೇಜ್ ಬರುತ್ತದೆ ಎಂದು ಈಗಲೂ ಎರಡು ವರ್ಷಗಳಿಂದ ಸಿಟಿ ಮುನಿಸಿಪಾಲಿಟಿಯಲ್ಲಿ ಒಂದು ಕೆಲಸವನ್ನೂ ಮಾಡಿಲ್ಲ. ಬರಿ ಹಳೆಯ ಬಿಲ್ಲುಗಳನ್ನು ಕೊಡುತ್ತಿದ್ದಾರೆ. ಏನು ಹಳೆಯ ಬಿಲ್ಲು ಅಂದರೆ ಒಂದೂವರೆ ಕೋಟಿ ರೂ. ಬ್ಯಾಲೆನ್ಸ್ ಇದೆಯೆಂದು ಹೇಳುತ್ತಾರೆ. ಹೀಗಾದರೆ ಎಲ್ಲಿ ಕೆಲಸ ಮಾಡಿದ್ದಾರೆ? ಎಲ್ಲೂ ಇಲ್ಲ. ಕಮಿಷನರ್ ಇದ್ದಾರೆ, ಬರೀ ಹಳೆಯ ಬಿಲ್ಲುಗಳನ್ನು ಕೊಡುವುದೇ ಅವರ ಕೆಲಸ. ಹೊಸ ಕೆಲಸ ಒಂದನ್ನೂ ಮಾಡಿಲ್ಲ. ಇಂಥ ಮುನಿಸಿಪಾಲಿಟಿಯನ್ನು ನಾನು ಏನು ಕೇಳುವುದು ನೀವೇ ಹೇಳಿ. ಲಾ ಅಂಡ್ ಆರ್ಡರ್‌ನ್ನು ಮೇನ್‌ಟೇನ್ ಮಾಡುವುದಕೋಸ್ಕರ ನಾನು wait ಮಾಡುತ್ತಿದ್ದೇನೆ. ಅದ್ದರಿಂದ ಆ ಮುನಿಸಿಪಾಲಿಟಿಯ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಡಿ.ಸಿ.ಯವರು ಬರೆದಿದ್ದಾರೆ. ಅದರ ಬಗ್ಗೆ ಇನ್ನೂ ಕ್ರಮ ತೆಗೆದುಕೊಂಡಿಲ್ಲ. ಡಿ.ಸಿ.ಯವರೇ ರೆಕಮಂಡೇಷನ್ ಮಾಡಿದ್ದಾರೆ. ಡಿ.ಸಿ. ರೆಕಮಂಡೇಷನ್ ಮೇಲೆ ಕ್ರಮ ತೆಗೆದುಕೊಳ್ಳಲೇಬೇಕು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಯವರು): ನನಗೆ ಈ ವಿಷಯದಲ್ಲಿ ನಾಳೆಯವರೆಗೆ ಸಮಯದ ಅವಕಾಶವನ್ನು ಕೊಡಬೇಕೆಂದು ಮಾನ್ಯ ಅಧ್ಯಕ್ಷರಲ್ಲಿ ಕೇಳುತ್ತೇನೆ.

ಅಧ್ಯಕ್ಷರು: ಸಭೆಯ ಮುಂದಿಡಲಾದ ಕಾಗದ ಪತ್ರಗಳು.